


ಬೆಂಗಳೂರಿನ ಪೇಟೆಬೀದಿಯೊಂದರ ಜನಜಂಗುಳಿ

ಖಚಿತಪಡಿಸಿರುವ 'ಜವಹರಲಾಲ್ ನೆಹರೂ ವಿವಿ'ಯ ಜನಸಂಖ್ಯಾ ತಜ್ಞ ಶಿರೀನ್ ಜಿಜೀಭಾಯ್, 'ಇದು ಆರೋಗ್ಯಕರ ಬೆಳವಣಿಗೆ' ಎಂದಿದ್ದಾರೆ.

ಬಾಲ್ಯವಿವಾಹ, ಹದಿಹರೆಯದ ತಾಯ್ತನ, ಗಂಡುಮಗುವಿನ ಹಪಹಪಿ, ಮಹಿಳಾ ಸಹಾಯವಾಣಿಗಳ ಅನುಪಸ್ಥಿತಿ, ಗರ್ಭಪಾತ ನಿಷೇಧದ ಕಾನೂನು, ಕುಟುಂಬ ಯೋಜನೆಯ ಕುರಿತು ಗಂಡಸರಿಗಿದ್ದ ಅಪನಂಬಿಕೆಯಿಂದಾಗಿ ಜನಸಂಖ್ಯೆಯ ಬೆಳವಣಿಗೆ ಗಾಬರಿ ಹುಟ್ಟಿಸುವಷ್ಟು ಏರಿಕೆಯಾಗಿತ್ತು. ಮುನ್ನೆಚ್ಚರಿಕೆ ಕ್ರಮಗಳ ನಂತರ ನಿಧಾನವಾಗಿ ಕುಸಿದು ಈಗ ಸ್ಥಿರಗೊಳ್ಳುತ್ತಿದೆ. 1947ರಲ್ಲಿ 35 ಕೋಟಿಯಷ್ಟಿದ್ದ ಜನಸಂಖ್ಯೆ 2019ರ ವೇಳೆಗೆ ನಾಲ್ಕು ಪಟ್ಟು ಏರಿಕೆಯಾಗಿ 137 ಕೋಟಿ ತಲುಪಿದೆ. ಇಂದಿನ ಜನಸಂಖ್ಯೆ 140 ಕೋಟಿಯ ಹತ್ತಿರಕ್ಕೆ ಬಂದಿದೆ. ವಿಶ್ವಸಂಸ್ಥೆಯ ಅಂದಾಜು ಅಧ್ಯಯನದಂತೆ ಭಾರತದ ಜನಸಂಖ್ಯೆ 2030ರ ವೇಳೆಗೆ 150 ಕೋಟಿ ತಲುಪಿ, ಇಪ್ಪತ್ತು ವರ್ಷಗಳ ನಂತರ 164 ಕೋಟಿ ತಲುಪಿ ವಿಶ್ವದ ಅತಿ ಹೆಚ್ಚು ಜನರಿರುವ ದೇಶವಾಗುತ್ತದೆ. ಆಗ ಚೀನಾದ ಜನಸಂಖ್ಯೆ 154 ಕೋಟಿ ಇರುತ್ತದೆ. 2018–19ರಲ್ಲಿ ಲೋಕಸಭೆಯಲ್ಲಿ ಮಂಡಿಸಲಾದ 'ಎಕನಾಮಿಕ್ ಸರ್ವೆ' ವರದಿಯಲ್ಲಿ ಮುಂದಿನ ದಶಕಗಳಲ್ಲಿ ದೇಶದ ಜನಸಂಖ್ಯೆಯಲ್ಲಿ ತೀವ್ರ ಕುಸಿತವಾಗಲಿದೆ ಎಂಬ ಅಂಶವಿದೆ. 'ಈಗಾಗಲೇ 19ರ ವಯಸ್ಸಿನೊಳಗಿನವರ ಸಂಖ್ಯೆ ಗರಿಷ್ಠ ಮಟ್ಟ ಮುಟ್ಟಿದ್ದು, ಮುಂದಿನ ದಿನಗಳಲ್ಲಿ ಅಗತ್ಯಕ್ಕೆ ತಕ್ಕಷ್ಟು ಶಾಲೆ, ಆಸ್ಪತ್ರೆ, ಉದ್ಯಮಗಳನ್ನು ಲೆಕ್ಕ ಹಾಕಿ ನಿರ್ಮಿಸಬೇಕು' ಎಂದಿರುವ ಶಿರೀನ್, 2021ರ ಕೊನೆಗೆ ದೇಶದ ಜನಸಂಖ್ಯೆ 'ಟಿಎಫ್ಆರ್' ರಿಪ್ಲೇಸ್‌ಮೆಂಟ್ ಲೆವೆಲ್‌ಗಿಂತ ಕಡಿಮೆಯಾಗಲಿದೆ ಎಂದಿದ್ದಾರೆ.

### ಡಬಲ್ ಇನ್‌ಕಂ, ನೋ ಚೆಲ್ಡ್ರನ್: ಚೀನೀಯರ ಹೊಸ ವರಸೆ

ಏರುಗತಿಯಲ್ಲಿದ್ದ ಜನಸಂಖ್ಯೆ ನಿಯಂತ್ರಿಸಲು ಚೀನಾ 1978ರಲ್ಲಿ 'ಒಂದೇ ಮಗು' ಸಾಕು ಎಂಬ ಕಾಯಿದೆ ಜಾರಿ ಮಾಡಿತ್ತು. ಹಲವು ಮಹಿಳೆಯರನ್ನು ಬಲವಂತವಾಗಿ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಗಿತ್ತು. ಅದರ ಸೈಡ್ ಎಫೆಕ್ಟ್ ಎಂಬಂತೆ ಜನಿಸುವವರ ಸಂಖ್ಯೆ ಕಡಿಮೆಯಾಗಿ, ಚೀನಾದ ತುಂಬ ಯುವಕರ ಸಂಖ್ಯೆ ಕಡಿಮೆಯಾಗಿ ಬರೀ ವಯಸ್ಸಾದವರೇ ಇದ್ದಾರೆ. 2013ರಲ್ಲಿ ಜನಸಂಖ್ಯಾ ನೀತಿಯನ್ನು ಸಡಿಲಗೊಳಿಸಿರುವ ಸರ್ಕಾರ, ಮೂರು ಮಕ್ಕಳನ್ನು ಮಾಡಿಕೊಳ್ಳಬಹುದು ಎಂದು ಹೇಳಿದ್ದರೂ ಯುವಕರು ಮಕ್ಕಳನ್ನು ಮಾಡಿಕೊಳ್ಳುವುದಿರಲಿ, ಮದುವೆಯೇ ಬೇಡ ಎನ್ನುತ್ತಿದ್ದಾರೆ. 2013ರಲ್ಲಿ 1.65ರಷ್ಟಿದ್ದ 'ಟಿಎಫ್ಆರ್' ಈಗ 1.69 ಆಗಿ ಸ್ವಲ್ಪ ಏರಿಕೆ ಕಂಡಿದೆ. ಇರುವ ಸಂಪನ್ಮೂಲಗಳನ್ನೆಲ್ಲ ನಾವೇ ಬಳಸಿ ಸುಖವಾಗಿರುವ ಅವಕಾಶವಿರುವಾಗ ನಮಗೇಕೆ ಮಕ್ಕಳು ಎಂದು ಚಿಂತಿಸುತ್ತಿರುವ ಯುವಜನ ಸಂತಾನಹರಣ ಚಿಕಿತ್ಸೆ ಮಾಡಿಕೊಳ್ಳುವ ಹಂತ ತಲುಪಿದ್ದಾರೆ. ಲಂಚ ಕೊಟ್ಟು ಕಾನೂನಿನ

## ತಪ್ಪು ಮಾಡಲು ಯಾಕೀ ಅವಸರ?

ಏನೆಲ್ಲ ಬಿಕ್ಕಟ್ಟುಗಳನ್ನು ದಾಟಿ ದೇಶದ ಜನಸಂಖ್ಯೆ ಸ್ಥಿರತೆ ಕಂಡುಕೊಳ್ಳುತ್ತಿದೆ. ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದುವಂತಿಲ್ಲ ಎಂದು ಕಾಯಿದೆ ರೂಪಿಸಿದ 12 ರಾಜ್ಯಗಳ ಪೈಕಿ ನಾಲ್ಕು ರಾಜ್ಯಗಳು ಈಗಾಗಲೇ ಅದನ್ನು ಹಿಂಪಡೆದಿವೆ. ವಿಶ್ವದ ಇತರ ದೇಶಗಳಲ್ಲೂ ಇಂತಹ ಕಾನೂನುಗಳು ವೈಫಲ್ಯ ಕಂಡಿವೆ. ಕಾಯಿದೆಗಳ ಕುರಿತು ವಿಸ್ತೃತ ಅಧ್ಯಯನ ನಡೆಸಿದ ಮಧ್ಯಪ್ರದೇಶ ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ನಿರ್ಮಲಾ ಬಚ್, 'ಇಂತಿಷ್ಟೇ ಮಕ್ಕಳನ್ನು ಮಾಡಿಕೊಳ್ಳಿ ಎಂದು ಒತ್ತಾಯಮಾಡುವ ಕಾನೂನು ಜಾರಿ ಮಾಡುವುದು, ಪಾಲಿಸದಿದ್ದರೆ ಸೌಲಭ್ಯ ಕಡಿತಗೊಳಿಸುವುದೆಲ್ಲ ಪ್ರಜಾಪ್ರಭುತ್ವ ಮತ್ತು ಸಂತಾನೋತ್ಪತ್ತಿಯ ಹಕ್ಕನ್ನು ಕಸಿದುಕೊಂಡಂತೆ. ಇದು ಸಂವಿಧಾನ ವಿರೋಧಿ ಕ್ರಮ. ಇಂಥ ಕಾನೂನಿಂದ ಶೇ 41ರಷ್ಟು ಕುಟುಂಬಗಳು ಸರ್ಕಾರ ನೀಡುವ ವಿವಿಧ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ' ಎಂದಿದ್ದಾರೆ. ಅದರಲ್ಲೂ ದಲಿತರೇ ಹೆಚ್ಚಾಗಿರುವುದು ಸಾಮಾಜಿಕ ತಾರತಮ್ಯದ ಪರಮಾವಧಿ, ಇಂಥ ಕಾನೂನುಗಳು ಈಗಲೇ ರದ್ದಾಗಬೇಕು ಎಂದು ಒತ್ತಾಯಿಸಿದ್ದಾರೆ.

1979ರಲ್ಲಿ ಚೀನಾ 'ಒಂದೇ ಮಗು'ವಿನ ಕಾನೂನು ಜಾರಿ ಮಾಡಿದಾಗ ಜನಸಂಖ್ಯೆ ಕಡಿಮೆಯಾಗಿ ಕಾರ್ಮಿಕರ ಕೊರತೆ ಉಂಟಾಗಿತ್ತು. ಆರ್ಥಿಕತೆ ಮಕಾಡೆ ಮಲಗತೊಡಗಿತ್ತು. ಲಿಂಗ ಪ್ರಾಮುಖ್ಯತೆಯ ಗರ್ಭಪಾತಗಳ ಸಂಖ್ಯೆ ಹೆಚ್ಚಿತ್ತು. 2013ರಲ್ಲಿ ಕಾನೂನನ್ನು ತೆಗೆದುಹಾಕಿದರೂ ಸಂತಾನೋತ್ಪತ್ತಿ ಕಾರ್ಯ ಮೊದಲಿನ ಪಟುತ್ವ ಹೊಂದಿಲ್ಲ ಎಂಬುದು ತಿಳಿದುಬಂದಿದೆ. ಚೀನಾದ 'ಜಿಯಾಂಗ್ ಜಿಯಾಟೊಂಗ್ ವಿವಿ'ಯ ತಜ್ಞ ಡಾರೆಲ್ ಬ್ರಿಕರ್, 'ಗರ್ಭಧಾರಣೆ, ಸಂತಾನೋತ್ಪತ್ತಿಯಂಥ ಸೂಕ್ಷ್ಮ ವಿಷಯಗಳಿಗೆ ಶಿಕ್ಷಿಸುವ ಮನೋಭಾವದ ಯಾವುದೇ ಕಾನೂನು ಮಾನವಹಕ್ಕುಗಳ ಉಲ್ಲಂಘನೆ' ಎಂದು ಹೇಳಿದ್ದಾರೆ. 'ಬೇರೆ ದೇಶಗಳು ಚೀನಾದಂತೆ ಮಾಡುವುದು ಬೇಡ' ಎಂದಿದ್ದಾರೆ.

ಭಾರತದಲ್ಲಿ ಜನಸಂಖ್ಯೆ ಈಗಾಗಲೇ ಕುಸಿತ ಕಂಡಿರುವುದರಿಂದ ಜನನ ನಿಯಂತ್ರಣ ಕ್ರಮ ಅಥವಾ ಕಾಯಿದೆಯ ಅವಶ್ಯಕತೆಯೇ ಇಲ್ಲ ಎಂದಿರುವ 'ಪಾಪ್ಯುಲೇಶನ್ ಫೌಂಡೇಶನ್ ಆಫ್ ಇಂಡಿಯಾ' ಸಂಸ್ಥೆಯ ಪೂನಂ ಮುತ್ರೇಜ ಯುವ ದಂಪತಿಗಳು, ಕಡಿಮೆ ಮಕ್ಕಳು ಮತ್ತು ಚಿಕ್ಕ ಕುಟುಂಬದ ಬಗ್ಗೆ ತುಂಬಾ ಆಸ್ಥೆ ಹೊಂದಿದ್ದಾರೆ, ಅದು ದೇಶದ ಪ್ರಗತಿಯಲ್ಲಿ ನಿರ್ಣಾಯಕವಾಗಲಿದೆ ಎಂದಿದ್ದಾರೆ.